ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು -560 003
AranyaBhavan, 18th Cross
Malleshwaram, Bengaluru-560 003
Telephone : 080 2334 6472
Email : apccffc@gmail.com

Old File No. A5(3).GFL.CR-28/2009-10
E-office File No. KFD/HOFF/A5-3(GFL)/34/2019-FC

**E-88289**
ದಿನಾಂಕ:**20-06-2019**
26

**ಅಧಿಕೃತ ಜ್ಞಾಪನ ಪತ್ರ**

**ವಿಷಯ:** Compensatory planting (1:10 ratio) in forest land diversion cases - regarding.

**ಉಲ್ಲೇಖ:**
1. ಈ ಕಚೇರಿಯ ಇದೇ ಸಂಖ್ಯೆಯ ಪತ್ರ ದಿನಾಂಕ 24-05-2018.
2. ಈ ಕಚೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಬಿ1/ಬಿಯುಡಿ/ಸಿಆರ್-32/2018-19 ದಿನಾಂಕ03-04-2019.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ F.No. 5-2/2017-FC ದಿನಾಂಕ 28-03-2019.

**ಪ್ರಸ್ತಾವನೆ:**

ಕೇಂದ್ರ ಸರಕಾರವು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಡಿ ನೀಡಿರುವ (ದಿನಾಂಕ 08-03-2019 ವರೆಗೆ ಚಾಲ್ತಿಯಲ್ಲಿರುವ) ಮಾರ್ಗಸೂಚಿಗಳ ಕಂಡಿಕೆ 3.2(viii)(b)ರ ಅನ್ವಯ ಒಂದು ಹೆಕ್ಟೇರ್ ವರೆಗೆ ಅರಣ್ಯ ಭೂಮಿಯನ್ನು ಅರಣ್ಯೇತರ ಚಟುವಟಿಕೆಗಳ ಬಳಕೆಗಾಗಿ ಅನುಮೋದಿಸಿದ ಪ್ರಕರಣಗಳಲ್ಲಿ ಮರಗಳನ್ನು ಕತರಾವಣೆ ಮಾಡುವ ಸಂದರ್ಭದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಉಪಯೋಗಿ ಸಂಸ್ಥೆಯವರಿಂದ ಪಾವತಿಸಿಕೊಳ್ಳ ಬೇಕಾದ ಮೊತ್ತವನ್ನು ಉಲ್ಲೇಖಿತ(1)ರ ಪತ್ರದ ಮೂಲಕ ನಿಗಧಿ ಪಡಿಸಲಾಗಿತ್ತು.

ಆದರೆ, 2019-20ನೇ ಸಾಲಿಗೆ ಅರಣ್ಯ ಇಲಾಖೆಯ ಅನುಸೂಚಿತ ಸಿಎಸ್ಎಸ್ಆರ್ (Common Sanctioned Schedule of Rates) ದರಗಳನ್ನು ಪರಿಷ್ಕರಿಸಿ ಉಲ್ಲೇಖ(2)ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ಈ ಹಿಂದೆ ನಿಗದಿಪಡಿಸಲಾಗಿದ Compensatory planting ಗಾಗಿ ದರಗಳನ್ನು ಪರಿಷ್ಕರಿಸಬೇಕಾಗಿದೆ.

ಇದಲ್ಲದೆ, ಉಲ್ಲೇಖ (3)ರ ಪತ್ರದ ಮೂಲಕ ಕೇಂದ್ರ ಸರ್ಕಾರವು ದಿನಾಂಕ 08-03-2019 ರಿಂದ ಅನ್ವಯವಾಗುವಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಸದರಿ ಮಾರ್ಗಸೂಚಿಯ ಕಂಡಿಕೆ 2.6(i) ರ ಅನ್ವಯ ಒಂದು ಹೆಕ್ಟೇರ್ ವರೆಗೆ ಅರಣ್ಯ ಭೂಮಿಯನ್ನು ಅರಣ್ಯೇತರ ಚಟುವಟಿಕೆಗಳ ಬಳಕೆಗಾಗಿ ಅನುಮೋದಿಸಿದ ಪ್ರಕರಣಗಳಲ್ಲಿ ಕನಿಷ್ಠ 100 (ಒಂದು ನೂರು) ಸಸಿಗಳನ್ನು ಬೆಳೆಸಲು ನಿಗದಿಪಡಿಸಿರುತ್ತದೆ.

ಆದ್ದರಿಂದ, ಈ ಕೆಳಕಂಡ ಆದೇಶ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಅಡಿಯಲ್ಲಿ ಕೇಂದ್ರ ಸರಕಾರದ ಇತ್ತೀಚಿನ ದಿನಾಂಕ 08-03-2019 ರಿಂದ ಅನ್ವಯವಾಗುವ ಮಾರ್ಗಸೂಚಿಯ ಕಂಡಿಕೆ 2.6(i) ರ ಅನ್ವಯ ಒಂದು ಹೆಕ್ಟೇರ್ ವಿಸ್ತೀರ್ಣದವರೆಗೆ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಕೆಗಾಗಿ ಅನುಮೋದನೆ ನೀಡುವ ಪ್ರಕರಣಗಳಲ್ಲಿ ಮರಗಳನ್ನು ಕತರಾವಣೆ ಮಾಡುವ ಸಂದರ್ಭದಲ್ಲಿ ಪರಿಹಾರಾತ್ಮಕ ನೆಡುತೋಪು (Compensatory planting) ಬೆಳೆಸಲು ಉಪಯೋಗಿ ಸಂಸ್ಥೆಗಳಿಂದ ಈ ಕೆಳಕಂಡ ದರಗಳಂತೆ ಪಾವತಿಸಿ ಕೊಳ್ಳಲು ಆದೇಶಿಸಿದೆ.

| Number of trees to be felled (Felling:Planting::1:10) | Amount to be recovered from User Agency |
|---|---|
| 16 or less | Rs. 1.82 lakh |
| >16 and up to 32 | Rs. 3.64 lakh |
| >32 and up to 48 | Rs. 5.46 lakh |
| >48 and up to 64 | Rs. 7.28 lakh |
| >64 and up to 80 | Rs. 9.10 lakh |

**ಈ ದರಗಳು ದಿನಾಂಕ 01-07-2019 ರಿಂದ ಜಾರಿಗೆ ಬರುತ್ತವೆ.**

ಈ ಮೇಲಿನ ದರಗಳಿಗೆ ಸಂಬಂಧಿತ ಸಾಂಕೇತಿಕ ಡಾಟಾ ಶೀಟ್ಗಳನ್ನು (indicative data sheets) ಅನುಬಂಧ-**A** ರಲ್ಲಿ ಲಗತ್ತಿಸಿದೆ. ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸ್ಥಳೀಯ ಪ್ರದೇಶಕ್ಕೆ ಅನುಗುಣವಾಗಿ ಡಾಟಾ ಶೀಟ್ಗಳಲ್ಲಿ ಇರುವ ಚಟುವಟಿಕೆಗಳನ್ನು ಅಗತ್ಯವಿದ್ದಲ್ಲಿ ಘಟಕದ ದರ ಮೀರದಂತೆ ಬದಲಾವಣೆ ಮಾಡಿಕೊಳ್ಳಬಹುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿಗಳ ವಿತರಣೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂವಹನ ಮತ್ತು ಮಾಹಿತಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಇಲಾಖೆಯ ವೆಬ್ ಸೈಟಿನಲ್ಲಿ ಅಪ್ ಲೋಡ್ ಮಾಡಲು ಕಳುಹಿಸಿದೆ.
5. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ ಹಾಗೂ ವನ್ಯಜೀವಿ ವಿಭಾಗ),
7. ಕಚೇರಿ ಆದೇಶ ಕಡತಕ್ಕೆ.

CCF
ICT